ಕರ್ನಾಟಕ ಸರ್ಕಾರ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003

ಸಂಖ್ಯೆ:-ಕ.ಶಾ.ಪ&ಮೌ.ನಿ.ಮ/ಪಿಯು(ಪ-1)/SC.RV.RT/2026 ದಿನಾಂಕ:21.05.2026

# ಸುತ್ತೋಲೆ

ವಿಷಯ: 2026 ರ ದ್ವಿತೀಯ ಪಿಯುಸಿ ಪರೀಕ್ಷೆ-2ರ ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳ ಛಾಯಾ ಪ್ರತಿ ಪಡೆಯಲು ಹಾಗೂ ಮರುಮೌಲ್ಯಮಾಪನ ಮತ್ತು ಮರುಎಣಿಕೆಗಾಗಿ ಅರ್ಜಿ ಸಲ್ಲಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಇಡಿ 195 ಡಿಜಿಡಿ 2017, ಬೆಂಗಳೂರು, ದಿನಾಂಕ:20/03/2018.

-------

ಕರ್ನಾಟಕ ಪ್ರೀ ಯೂನಿವರ್ಸಿಟಿ ಕೋರ್ಸ್ ಸ್ಟೇಟ್ ಲೆವೆಲ್ ಪರೀಕ್ಷಾ ನಿಯಮಾವಳಿ 1997ರ ನಿಯಮ 29(1) ಹಾಗೂ 30(1)ರ ಪ್ರಕಾರ 2026 ರ ದ್ವಿತೀಯ ಪಿಯುಸಿ ಪರೀಕ್ಷೆ-2 ರ ಉತ್ತರ ಪತ್ರಿಕೆಗಳ ಛಾಯಾ ಪ್ರತಿ ಪಡೆಯಲು, ಮರುಎಣಿಕೆ ಹಾಗೂ ಮರುಮೌಲ್ಯಮಾಪನಕ್ಕಾಗಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಸದರಿ ಕಾರಣಕ್ಕಾಗಿ 2026 ರ ಪರೀಕ್ಷೆ-2 ಕ್ಕೆ ಹಾಜರಾದ ವಿದ್ಯಾರ್ಥಿಗಳು ಮಾತ್ರ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲಾಗಿದೆ.

## -:ವಿದ್ಯಾರ್ಥಿಗಳಿಗೆ ವಿಶೇಷ ಸೂಚನೆಗಳು:-

1. ವಿದ್ಯಾರ್ಥಿಗಳು ಉತ್ತರ ಪತ್ರಿಕೆಯ ಛಾಯಾ ಪ್ರತಿಗಳಿಗೆ ಅರ್ಜಿ ಸಲ್ಲಿಸಿ ಛಾಯಾ ಪ್ರತಿ ಪಡೆದ ವಿಷಯಗಳಿಗೆ ಮಾತ್ರ ಮರುಮೌಲ್ಯಮಾಪನ /ಮರುಎಣಿಕೆಗಾಗಿ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.
2. ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಿರುವ ವಿಷಯಗಳಿಗೆ ಪ್ರತ್ಯೇಕವಾಗಿ ಮರುಎಣಿಕೆಗೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.
3. ಆನ್‌ಲೈನ್‌ನಲ್ಲಿ ಮಾತ್ರ ಅರ್ಜಿ ಸಲ್ಲಿಸಬೇಕು, ಹೊರತುಪಡಿಸಿ ಇನ್ನಾವುದೇ ವಿಧಾನಗಳಲ್ಲಿ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.
4. ನಿಗದಿಯಾಗಿರುವ ಶುಲ್ಕವನ್ನು ಆನ್‌ಲೈನ್ ಮೂಲಕ KARNATAKA-ONE-PAYMENT GATEWAY ಮುಖಾಂತರ ಪಾವತಿಸಲು ಅವಕಾಶವಿರುತ್ತದೆ.
5. ಉಲ್ಲೇಖಿತ ಸರ್ಕಾರದ ಆದೇಶದಂತೆ ಛಾಯಾ ಪ್ರತಿ ಹಾಗೂ ಮರುಮೌಲ್ಯಮಾಪನಕ್ಕಾಗಿ ಕೆಳಕಂಡಂತೆ ಶುಲ್ಕಗಳನ್ನು ನಿಗದಿಪಡಿಸಲಾಗಿದೆ.

## ಶುಲ್ಕಗಳ ವಿವರ

| | | |
|---|---|---|
| ಛಾಯಾ ಪ್ರತಿಗಾಗಿ ಅರ್ಜಿ ಸಲ್ಲಿಸಲು | ಪ್ರತಿ ವಿಷಯಕ್ಕೆ | **ರೂ 530/-** |
| ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಲು | ಪ್ರತಿ ವಿಷಯಕ್ಕೆ | **ರೂ 1670/-** |
| ಅಂಕಗಳ ಮರುಎಣಿಕೆಗಾಗಿ | **ಯಾವುದೇ ಶುಲ್ಕ ಇರುವುದಿಲ್ಲ.** | |

## ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕ

| ಪ್ರಕ್ರಿಯೆಯ ವಿವರ | ರಿಂದ | ವರೆಗೆ |
|---|---|---|
| ಛಾಯಾ ಪ್ರತಿಗಾಗಿ ಅರ್ಜಿ ಸಲ್ಲಿಸುವ ದಿನಾಂಕ | **21.05.2026** | **23.05.2026** |
| ಛಾಯಾ ಪ್ರತಿ ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭ ಹಾಗೂ ಕೊನೆಯ ದಿನಾಂಕ | **22.05.2026** | **24.05.2026** |
| ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಲು ಹಾಗೂ ಮರುಎಣಿಕೆಗಾಗಿ ಅರ್ಜಿ ಸಲ್ಲಿಸಲು (ಛಾಯಾ ಪ್ರತಿ ತೆಗೆದುಕೊಂಡವರಿಗೆ ಮಾತ್ರ ಅವಕಾಶವಿರುತ್ತದೆ) | **22.05.2026** | **25.05.2026** |

## I ಉತ್ತರ ಪತ್ರಿಕೆಗಳ ಛಾಯಾ ಪ್ರತಿ ಪಡೆಯಲು ಅರ್ಜಿ ಸಲ್ಲಿಸುವ ವಿಧಾನ:-

1. ಮಂಡಲಿಯ ವೆಬ್‌ಸೈಟ್ **https://kseab.karnataka.gov.in** ರಲ್ಲಿನ ಪಿಯುಸಿ ವಿದ್ಯಾರ್ಥಿ ಅಂಕಣದಲ್ಲಿ ಅಥವಾ KarnatakaOne Mobile App ನಲ್ಲಿ application for Photo copy, Re-valuation/ Re-totaling ಎಂದು ಇರುತ್ತದೆ.
2. Link ಅನ್ನು ಕ್ಲಿಕ್ ಮಾಡಿದರೆ Calender of Events ಪುಟ ತೆರೆಯುತ್ತದೆ. ಇದರಲ್ಲಿ "How to Apply ಅನ್ನು ಕಡ್ಡಾಯವಾಗಿ ಓದಿ ತಿಳಿದುಕೊಳ್ಳುವುದು.
3. 2026 ರ ದ್ವಿತೀಯ ಪಿಯುಸಿ ಪರೀಕ್ಷೆ-2 ರ ನೋಂದಣಿ ಸಂಖ್ಯೆ (Register Number) ಯನ್ನು ಪ್ರವೇಶ ಪತ್ರದಲ್ಲಿರುವಂತೆ ನಮೂದಿಸಬೇಕು. ತಕ್ಷಣವೇ ವಿದ್ಯಾರ್ಥಿಗಳ ಮಾಹಿತಿ display ಆಗುತ್ತದೆ.
4. Photo copy ಪಡೆಯಲು ಇಚ್ಛಿಸಿದ ವಿಷಯ/ ವಿಷಯಗಳನ್ನು ಒಂದೇ ಬಾರಿಗೆ ಆಯ್ಕೆ ಮಾಡಿಕೊಂಡು ವಿದ್ಯಾರ್ಥಿಯ/ಪೋಷಕರ ನಿಖರವಾದ ಮೊಬೈಲ್ ಸಂಖ್ಯೆ, ತಮ್ಮ ಖಾಸಗಿ ಇಮೇಲ್ ಐಡಿ ಹಾಗೂ ಸ್ವ-ವಿಳಾಸವನ್ನು ಮಾತ್ರ ನಮೂದಿಸಬೇಕು. ನಂತರ Submit ಬಟನ್ ಕ್ಲಿಕ್ ಮಾಡಿದ ಕೂಡಲೇ ಚಲನ್ ಸಂಖ್ಯೆಯು Auto-Generate ಆಗುತ್ತದೆ.
5. "Make payment" ಬಟನ್ ಕ್ಲಿಕ್ ಮಾಡಿದ ನಂತರ "Online payment" ಅನ್ನು ಕ್ಲಿಕ್ ಮಾಡುವುದು.

- ನಂತರ Karnataka-one ಬಟನ್ ಅನ್ನು ಕ್ಲಿಕ್ ಮಾಡುವುದು,
- ನೀವು ದಾಖಲಿಸಿದ ಮಾಹಿತಿ display ಆಗುತ್ತದೆ.
- "pay now" ಬಟನ್ ಕ್ಲಿಕ್ ಮಾಡುವುದು.
- Karnataka-one ಪುಟದಲ್ಲಿ continue for payment ಆಯ್ಕೆ ಮಾಡುವುದು.
- ಇದರಲ್ಲಿ "Terms and conditions" ಕಡ್ಡಾಯವಾಗಿ ಓದಿ "check box" ಅನ್ನು ಕ್ಲಿಕ್ ಮಾಡುವುದು,
- continue for payment ಆಯ್ಕೆ ಮಾಡುವುದು.
- ನಂತರ "pay now" ಕ್ಲಿಕ್ ಮಾಡುವುದು.
- Processing ಆಗುವವರೆಗೆ "Back button"/"Close button" ಅಥವಾ "Refresh button"ಗಳನ್ನು ಒತ್ತಬೇಡಿ.
- "Online payment" ಮುಖಾಂತರ ಹಣ ಸಂದಾಯ ಆದ ನಂತರ ನೀವು ನಮೂದಿಸಿದ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಸಂದೇಶ ಬರುತ್ತದೆ.

- SMS ಸಂದೇಶ ಬಾರದಿದ್ದಲ್ಲಿ ಹಣ ಸಂದಾಯಿಸಿದ Karnataka-one ಅನ್ನು ಕೂಡಲೇ ಸಂಪರ್ಕಿಸಿ.

6. Photo copy ಗೆ Apply ಮಾಡಿದ ನಂತರ ಬರುವ Challan/Consumer number ಅನ್ನು ವಿದ್ಯಾರ್ಥಿಯು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಉಪಯೋಗಿಸುವಂತಿಲ್ಲ. **ಮರುಮೌಲ್ಯಮಾಪನಕ್ಕೆ ಪ್ರತ್ಯೇಕ** Challan/Consumer number ಅನ್ನು **Generate ಮಾಡಿಕೊಳ್ಳಬೇಕು.**
7. ಅಭ್ಯರ್ಥಿಯು MAKE PAYMENT ಮಾಡಿದ ನಂತರ **Generate** ಆಗುವ Challan/Consumer ಅನ್ನು ಮುಂದಿನ ಎಲ್ಲಾ ಪ್ರಕ್ರಿಯೆಗಳಿಗೂ ಬಳಸಿಕೊಳ್ಳಬೇಕಾಗಿರುವುದರಿಂದ ಅಭ್ಯರ್ಥಿಗಳು ಈ ಸಂಖ್ಯೆಯನ್ನು ಕಾಯ್ದಿರಿಸಿಕೊಳ್ಳುವುದು.
8. ಉತ್ತರ ಪತ್ರಿಕೆಯ Photo copy ಅನ್ನು ಮಂಡಲಿ ವೆಬ್‌ಸೈಟ್‌ನಲ್ಲಿ UPLOAD ಮಾಡಲಾಗುತ್ತದೆ. UPLOAD ಮಾಡಲಾದ ಉತ್ತರ ಪತ್ರಿಕೆಯ Photo copy ಅನ್ನು ಮಂಡಲಿಯ ಜಾಲತಾಣದಲ್ಲಿ ನೀಡಲಾಗಿರುವ ಲಿಂಕ್ ಮುಖಾಂತರವೇ Challan/Consumer number ಅನ್ನು ನಮೂದಿಸಿ ಡೌನ್‌ಲೋಡ್ ಮಾಡಿಕೊಳ್ಳುವುದು.
9. ವಿದ್ಯಾರ್ಥಿಗಳು ಈ ಮೊದಲೇ ನೀಡಲಾದ ಚಲನ್ ಸಂಖ್ಯೆಯನ್ನು ಬಳಸಿ Answer paper Photo copy ಯನ್ನು **ದಿನಾಂಕ:22.05.2026 ರಿಂದ 24.05.2026ರ ರೊಳಗೆ** ಡೌನ್‌ಲೋಡ್ ಮಾಡಿಕೊಳ್ಳುವುದು.
10. Photo copy ಯನ್ನು Download ಮಾಡಿಕೊಳ್ಳಲು ಅನುಸರಿಸಬೇಕಾದ ಕ್ರಮಗಳು:-
    - ಮಂಡಲಿಯ ವೆಬ್‌ಸೈಟ್ **https://kseab.karnataka.gov.in** ರಲ್ಲಿನ ಪಿಯುಸಿ ವಿದ್ಯಾರ್ಥಿ ಅಂಕಣದಲ್ಲಿ ಅಥವಾ KarnatakaOne Mobile App ನಲ್ಲಿ Download Scanned copy ಎಂಬ ಲಿಂಕ್‌ಅನ್ನು ಕ್ಲಿಕ್ ಮಾಡುವುದು. ನಂತರ Photo copy ಗಾಗಿ ಶುಲ್ಕ ಪಾವತಿಸಿರುವ Challan/Consumer number ಅನ್ನು Enter ಮಾಡಿ Submit ಮಾಡುವುದು.
    - ಆನಂತರ ವಿದ್ಯಾರ್ಥಿಯ ನೋಂದಣಿ ಸಂಖ್ಯೆ ಮತ್ತು ಶುಲ್ಕ ಪಾವತಿಸಿರುವ ವಿಷಯಗಳು Display ಆಗುತ್ತವೆ. ತಾವು ಇಚ್ಛಿಸಿದ ಭಾಷೆ/ವಿಷಯವನ್ನು (Subject) ಆಯ್ಕೆ ಮಾಡಿಕೊಳ್ಳಬೇಕು.
    - Photo copy ಯನ್ನು Download ಮಾಡಿಕೊಳ್ಳಬೇಕು.

**ಉತ್ತರ ಪತ್ರಿಕೆಗಳ ಅಂಕಗಳ ಮರುಎಣಿಕೆ ಹಾಗೂ ಮರುಮೌಲ್ಯಮಾಪನಕ್ಕಾಗಿ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25.05.2026.**

## II ಮರು ಎಣಿಕೆಗಾಗಿ (Re-totalling) ಅರ್ಜಿ ಸಲ್ಲಿಸಲು ಅನುಸರಿಸಬೇಕಾದ ಕ್ರಮಗಳು:-

1. ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳ ಛಾಯಾ ಪ್ರತಿಯನ್ನು ಪಡೆದುಕೊಂಡು ಪರಿಶೀಲಿಸಿದ ನಂತರ ಅಂಕಗಳ ಎಣಿಕೆಯಲ್ಲಿ ವ್ಯತ್ಯಾಸ ಕಂಡು ಬಂದಲ್ಲಿ ಮಾತ್ರ ಮರುಎಣಿಕೆಗಾಗಿ (Re-totaling) ಅರ್ಜಿ ಸಲ್ಲಿಸಬೇಕು.
2. ಮರುಎಣಿಕೆಗಾಗಿ ಶುಲ್ಕ ಪಾವತಿಸುವಂತಿಲ್ಲ.
3. ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳ ಛಾಯಾ ಪ್ರತಿ ಪಡೆಯಲು ಅನುಸರಿಸಿದ ಕ್ರಮವನ್ನೇ ಮರುಎಣಿಕೆಗೆ ಅರ್ಜಿ ಸಲ್ಲಿಸಲು ಅನುಸರಿಸುವುದು. ಆದರೆ ಮರುಎಣಿಕೆಗೆ ಚಲನ್ ಡೌನ್‌ಲೋಡ್ ಮಾಡುವ ಅವಶ್ಯಕತೆ ಇರುವುದಿಲ್ಲ.

4. ಮರುಎಣಿಕೆ ಫಲಿತಾಂಶವನ್ನು ಮಂಡಲಿಯ ಜಾಲತಾಣದಲ್ಲಿ ಪ್ರಕಟಿಸಲಾಗುವುದು.
5. ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವವರು ಮರುಎಣಿಕೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

## III. ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಲು ಅನುಸರಿಸಬೇಕಾದ ಕ್ರಮಗಳು:-

1. Photo copy ಯನ್ನು ಪಡೆದುಕೊಂಡು ಪರಿಶೀಲಿಸಿದ ನಂತರವೇ ಮರುಮೌಲ್ಯಮಾಪನಕ್ಕಾಗಿ (Re-valuation) ಅರ್ಜಿ ಸಲ್ಲಿಸಬೇಕು.
2. KARNATAKA PRE UNIVERSITY COURSE S.L.P.E (AMENDMENT) RULES, 2023 ರನ್ವಯ ಮೌಲ್ಯಮಾಪನದಲ್ಲಿ ಪಡೆದ ಅಂಕಗಳಿಗಿಂತ ಮರುಮೌಲ್ಯಮಾಪನದಲ್ಲಿ **ಒಂದು ಅಂಕ ಅಥವಾ ಒಂದಕ್ಕಿಂತ ಅಂಕಗಳು ಹೆಚ್ಚಾದಲ್ಲಿ/ಕಡಿಮೆಯಾದಲ್ಲಿ ಮರುಮೌಲ್ಯಮಾಪನದಲ್ಲಿ ಪಡೆದ ಅಂಕಗಳನ್ನು ಮಾತ್ರ ಪರಿಗಣಿಸಲಾಗುವುದು.** ಯಾವುದೇ ಕಾರಣಕ್ಕೂ ವಿದ್ಯಾರ್ಥಿಯು ಮೊದಲು ಪಡೆದ ಅಂಕಗಳನ್ನು ಮರುಸ್ಥಾಪಿಸಲು ಅವಕಾಶವಿರುವುದಿಲ್ಲ.
3. **ಮರುಮೌಲ್ಯಮಾಪನದ ಬಗ್ಗೆ ಮರುಮೌಲ್ಯಮಾಪಕರ ಸಮಿತಿಯು ತೆಗೆದುಕೊಂಡ ನಿರ್ಧಾರವೇ ಅಂತಿಮವಾಗಿದ್ದು, ಇದರ ಮೇಲೆ ಮರುಪರಿಶೀಲನೆ ಅಥವಾ ಮೇಲ್ಮನವಿ ಸಲ್ಲಿಸಲು ಅವಕಾಶವಿರುವುದಿಲ್ಲ.**
4. ಛಾಯಾ ಪ್ರತಿ ಪಡೆಯಲು ಅನುಸರಿಸಿದ ಕ್ರಮವನ್ನೇ ಮರುಮೌಲ್ಯಮಾಪನಕ್ಕೂ (Re-valuation) ಅನುಸರಿಸುವುದು.
5. Application details ನಲ್ಲಿ ವಿದ್ಯಾರ್ಥಿಯು ತಮ್ಮ ಬ್ಯಾಂಕ್ ಖಾತೆಯ ಮಾಹಿತಿಯನ್ನು ಭರ್ತಿ ಮಾಡುವುದು.
6. ಮರುಮೌಲ್ಯಮಾಪನ/ಮರುಎಣಿಕೆ ಕಾರ್ಯ ಮುಗಿದ ನಂತರ ಫಲಿತಾಂಶವನ್ನು ಮಂಡಲಿಯ ವೆಬ್‌ಸೈಟ್ **https://kseab.karnataka.gov.in** ನ ಜಾಲತಾಣದ ಪಿಯುಸಿ ವಿದ್ಯಾರ್ಥಿ ಅಂಕಣದಲ್ಲಿ ಪ್ರಕಟಿಸಲಾಗುವುದು.
7. 2026 ರ ದ್ವಿತೀಯ ಪಿಯುಸಿ ಪರೀಕ್ಷೆ-2 ರ ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳ ಛಾಯಾ ಪ್ರತಿ ಪಡೆಯಲು ಹಾಗೂ ಮರುಮೌಲ್ಯಮಾಪನ ಮತ್ತು ಮರುಎಣಿಕೆಗಾಗಿ ಅರ್ಜಿ ಸಲ್ಲಿಸುವ ಬಗ್ಗೆ ಮಂಡಲಿಯ ವೆಬ್‌ಸೈಟ್ **https://kseab.karnataka.gov.in** ನ ಜಾಲತಾಣದಲ್ಲಿನ ಪಿಯುಸಿ ವಿದ್ಯಾರ್ಥಿ ಅಂಕಣದಲ್ಲಿ ಪ್ರಕಟಿಸಿರುವ **"ಸುತ್ತೋಲೆ"** ಯನ್ನು ವೀಕ್ಷಿಸಬಹುದಾಗಿದೆ.

**ಹೆಚ್ಚಿನ ಮಾಹಿತಿಗಾಗಿ ಮಂಡಲಿಯ ಸಹಾಯವಾಣಿ ಸಂಖ್ಯೆ: 080-23310075/76 ನ್ನು ಸಂಪರ್ಕಿಸುವುದು.**

ಅಧ್ಯಕ್ಷರು
ಕರ್ನಾಟಕ ಶಾಲಾ ಪರೀಕ್ಷೆ ಮತ್ತು
ಮೌಲ್ಯ ನಿರ್ಣಯ ಮಂಡಲಿ.

ಕ್ರಮಕ್ಕಾಗಿ:-

1. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಉಪನಿರ್ದೇಶಕರುಗಳು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ (ವಿದ್ಯಾರ್ಥಿಗಳಿಗೆ ಈ ಕುರಿತು ಸೂಕ್ತ ನಿರ್ದೇಶನ ನೀಡಲು)
3. ಹಿರಿಯ ಸಹಾಯಕ ನಿರ್ದೇಶಕರು, ಗಣಕ ಶಾಖೆ, ಕ.ಶಾ.ಪ&ಮೌ.ನಿ.ಮಂಡಲಿ ರವರಿಗೆ (ಮಂಡಲಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ)

4. ಹಿರಿಯ ಸಹಾಯಕ ನಿರ್ದೇಶಕರು, "ಬಿ" ಶಾಖೆ, ಕ.ಶಾ.ಪ&ಮೌ.ನಿ.ಮಂಡಲಿ ರವರಿಗೆ
5. ಲೆಕ್ಕಾಧಿಕಾರಿಗಳು, ಲೆಕ್ಕಶಾಖೆ, ಕ.ಶಾ.ಪ&ಮೌ.ನಿ.ಮಂಡಲಿ, ಬೆಂಗಳೂರು-3

ಪ್ರತಿಯನ್ನು ಗೌರವಪೂರ್ವಕವಾಗಿ ಮಾಹಿತಿಗಾಗಿ:-

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1
2. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-12
3. ನಿರ್ದೇಶಕರು (ಪರೀಕ್ಷೆಗಳು) ರವರ ಆಪ್ತ ಶಾಖೆ, ಕ.ಶಾ.ಪ&ಮೌ.ನಿ.ಮಂಡಲಿ, ಬೆಂಗಳೂರು
4. ಜಂಟಿ ನಿರ್ದೇಶಕರು, (ಪಿಯು ಪರೀಕ್ಷೆ) ಕ.ಶಾ.ಪ&ಮೌ.ನಿ.ಮಂಡಲಿ, ಬೆಂಗಳೂರು
5. ಉಪನಿರ್ದೇಶಕರು, (ಪಿಯು ಪರೀಕ್ಷೆ) ಕ.ಶಾ.ಪ&ಮೌ.ನಿ.ಮಂಡಲಿ, ಬೆಂಗಳೂರು
6. ಹೆಚ್ಚುವರಿ/ಕಛೇರಿ ಪ್ರತಿ.